1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ,
ಕುಂದಾಪುರ

ಸಿ.ಸಿ. ನಂಬ್ರಃ 529/2017

ಚಾಸಾಃ 15 ಪ್ರಾಸಾಃ7

ದಿನಾಂಕಃ 11.02.2026

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ದೇವೇಂದ್ರ |
| ತಂದೆಯ ಹೆಸರು | : | ಲೇಟ್ ಕೃಷ್ಣಪ್ಪ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ನಿವೃತ್ತ ಪಿ ಎಸ್ ಐ |
| ವಾಸ ಸ್ಥಳ | : | ಅಂಬಾಗಿಲು, ಉಡುಪಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ**

ನಾನು 2014 ರಿಂದ 2017ರವರೆಗೆ ಕುಂದಾಪುರದ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 10.12.2016 ರಂದು ಚಾಸಾ.13 ರವರು ಪ್ರಕರಣವನ್ನು ದಾಖಲಿಸಿ ನನಗೆ ಮುಂದಿನ ತನಿಖೆಗೆ ಪ್ರಕರಣದ ಕಡತವನ್ನು ಹಸ್ತಾಂತರಿಸಿರುತ್ತಾರೆ. ನಾನು ಘಟನಾ ಸ್ಥಳಕ್ಕೆ ಭೇಟಿ ನೀಡಿ, ಚಾಸಾ.1ರವರು ತೋರಿಸಿದ ಸ್ಥಳದಲ್ಲಿ ಪಂಚರಾದ ಚಾಸಾ.3 ಮತ್ತು 4 ರವರ ಸಮಕ್ಷಮ 12.30 ರಿಂದ 1.30 ರವರೆಗೆ ಮಹಿಸಿ ನಕ್ಷೆ ತಯಾರಿಸಿ, ಫೋಟೋ ತೆಗೆದು, ಕೆಎಲ್-10-4837 ಕಾರನ್ನು ವಶಕ್ಕೆ ಪಡೆದು, ಸ್ವತ್ತುಪಟ್ಟಿಯಲ್ಲಿ ಅಳವಡಿಸಿರುತ್ತೇನೆ. ಸಾಕ್ಷಿದಾರರಾದ ಚಾಸಾ.2ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ.

ದಿನಾಂಕ 16.12.2016 ರಂದು ಚಾಸ.16ರವರ ಆದೇಶದ ಮೇರೆಗೆ ಕುಂದಾಪುರದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಮೃತ ಗುರುರಾಜ ಬಾಯರಿ ರವರ ಶವಪಂಚನಾಮೆಯನ್ನು 8.15 ರಿಂದ 10.15 ರವರಗೆ ಕ್ರಮ ವಹಿಸಿ ಚಾಸಾ.8 ಮತ್ತು 9 ರವರ ಹೇಳಿಕೆಯನ್ನು ಪಡೆದಿರುತ್ತೇನೆ.

ಸಾಕ್ಷಿಯು ನಿಪಿ.2, 3 ಮತ್ತು 7 ರಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ.2(ಡಿ), 3(ಡಿ) ಮತ್ತು 7(ಎ) ಎಂದು ಗುರುತಿಸಲಾಯಿತು. ನಿಪಿ.4 ಮತ್ತು 5 ರಲ್ಲಿ ವಾಹನ ಮತ್ತು ನಿಪಿ.6 ರಲ್ಲಿ ಘಟನಾ ಸ್ಥಳವನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಕಲಂ.304(ಎ) ಪ್ರಕರಣದಲ್ಲಿ ವೃತ್ತ ನಿರೀಕ್ಷಕರ ಮೌಖಿಕ ಆದೇಶದ ಮೇರೆಗೆ ತನಿಖೆಯನ್ನು ಮಾಡಬಹುದು. ಆದರೆ ಪೂರ್ಣ ತನಿಖೆ ಮಾಡುವ ಅಧಿಕಾರ ಇರುವುದಿಲ್ಲ. ಕಡತವನ್ನು ಸ್ವೀಕರಿಸಿದ ನಂತರ ಸ್ಥಳಕ್ಕೆ ಭೇಟಿ ನೀಡಿರುತ್ತೇನೆ. ಚಾಸಾ.1 ಮತ್ತು ಗಾಯಾಳು ಒಟ್ಟಾಗಿ ರಸ್ತೆ ದಾಟುತ್ತಿದ್ದರು. ಚಾಸ.1ರವರು ಆ ವೇಳೆಯಲ್ಲಿ ಬಸ್ಸಿ ಗಾಗಿ ಕಾಯುತ್ತಿದ್ದರು. ಸದ್ರಿ ದಿನ ಚಾಸಾ.1 ಮತ್ತು ಗಾಯಾಳು ಒಟ್ಟಾಗಿ ಸ್ಥಳದಲ್ಲಿ ಇಲ್ಲದೇ ಆ ರೀತಿ ಇದ್ದ ಪಕ್ಷದಲ್ಲಿ ಚಾಸಾ.1ರವರಿಗೂ ಪೆಟ್ಟಾಗಬೇಕಿತ್ತು ಎಂದರೆ ಸರಿಯಲ್ಲ. ಪಶ್ಚಿಮ ಭಾಗದ ರಸ್ತೆಯನ್ನು ದಾಟಿ ಪೂರ್ವ ಬದಿಗೆ ದಾಟುವ ವೇಳೆಯಲ್ಲಿ ಅಪಘಾತವಾಗಿರುತ್ತದೆ. ಪಿರ್ಯಾದಿಯ ಪ್ರಕಾರ ಅಪಘಾತವು ಪೂರ್ವ ಬದಿಯಲ್ಲಿ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ಆದ್ದರಿಂದ ವಾಹನ ಚಾಲಕನ ಯಾವುದೇ ತಪ್ಪು ಇಲ್ಲ ಎಂದರೆ ಸರಿಯಲ್ಲ. ಯಾವುದೇ ಪ್ರತ್ಯಕ್ಷದರ್ಶಿಗಳ ವಿಚಾರಣೆ ಆಗಿಲ್ಲ ಎಂದರೆ ಸರಿಯಲ್ಲ. ಚಾಸಾ.1ರವರು ಸಿದ್ಧಾಪುರ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದು, ಘಟನಾ ಸ್ಥಳದಲ್ಲಿ ಇಲ್ಲ ಎಂದರೆ ಸರಿಯಲ್ಲ. ಘಟನೆಗೆ ಪೂರಕವಾದ ಯಾವುದೇ ತನಿಖೆಯನ್ನು ಕೈಗೊಳ್ಳದೇ ಆರೋಪಿಯ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಲು ಅವಶ್ಯಕವಾದ ದಾಖಲೆಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಇಬ್ಬರು ವ್ಯಕ್ತಿಗಳು ನಡೆದುಕೊಂಡು ಹೋಗುತ್ತಿರುವಾಗ ಅಪಘಾತವಾದರೆ ಇಬ್ಬರಿಗೂ ಪೆಟ್ಟಾಗಬೇಕು ಎಂದರೆ ನನಗೆ ತಿಳಿದಿಲ್ಲ. ಸಾಕ್ಷಿದಾರರ ಸಹಿಯನ್ನು ಠಾಣೆಯಲ್ಲಿ ಪಂಚನಾಮೆಗೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಆಪಾದಿಸಿರುವ ಅಪಘಾತದಲ್ಲಿ ಆರೋಪಿಯ ಯಾವುದೇ ತಪ್ಪು ಇಲ್ಲ ಎಂದರೆ ಸರಿಯಲ್ಲ. ಸರಿಯಾದ ತನಿಖೆಯನ್ನು

ಮಾಡದೇ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ದಿನ ಆರೋಪಿ ವಾಹನವನ್ನು ಚಲಾಯಿಸಿ ಅಪಘಾತಪಡಿಸಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

Sd/-

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ. ದ. ನ್ಯಾ. ದಂ. ಕುಂದಾಪುರ**